ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮದಲ್ಲಿ ಆಗಿರುವ ನಷ್ಟ

೭೧೯. ಶ್ರೀ ಪಂಪಾಪತಿ (ದಾವಣಗೆರೆ)—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರೇಷ್ಮೆ ಕೈಗಾರಿಕಾ ಅಭಿವೃದ್ಧಿ ನಿಗಮದ ವಮುಖ್ಯ ಕಚೇರಿಗೆ ನೀಡಲಾಗಂತ್ತಿರುವ ಬಾಡಿಗೆಯ ದರವೆಷ್ಟು ?

ಆ) ಈ ನಿಗಮಕ್ಕೆ ಸ್ವಂತ ಕಟ್ಟಡ ಹೊಂದಲು ಸಾಧ್ಯವಾಗುವುದೇ ?

ಇ) ನಿಗಮಂದ ಕಾರ್ಯಾನೆಗಳಲ್ಲಿ ಪೂರ್ಣ ಪ್ರಮಾಣದ ಉತ್ಪಾದನೆ ಆಗುತ್ತಿಲ್ಲವೆಂಬ ವಿಷಯಂ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಇದರಿಂದಾಗಿ ಹೆಚ್ಚುವರಿ ವೆಚ್ಚ ಹೆಚ್ಚಾಗುವುದಿಲ್ಲವೇ ?

ಉ) ಪೂರ್ಣ ಪ್ರಮಾಣದ ಉತ್ಪಾದನೆ ಮಾಡಲಂ ಕ್ರಮ ಕೈಗೊಳ್ಳಲಾಗುವುದೇ ?

ಊ) ಮೇಲಿನ ನ್ಯೂನ್ಯತೆಗಳಿಂದಾಗಿ ನಿಗಮಕ್ಕೆ ಆಗುತ್ತಿರುವ ನಷ್ಟವೆಷ್ಟು ?

ಋ) ನಿಗಮಕ್ಕೆ ಆಗುತ್ತಿರುವ ನಷ್ಟವನ್ನು ತಡೆಗಟ್ಟಲು ಸರ್ಕಾರದವರು ತೆಗೆದುಕೊಳ್ಳುವ ಕ್ರಮವೇನು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ವಿಾನುಗಾರಿಕೆ ಸಚಿವರು).—

ಅ) ವಾಸಿಕ ಬಾಡಿಗೆಯ ದರ ರೂ. ೨೪,೪೦೦ ಗಳು.

ಆ) ಹಣಕಾಸಿನ ಪರಿಸ್ಥಿತಿ ಉತ್ತಮವಾಗಿಲ್ಲದಿರುವುದರಿಂದ ಸಧ್ಯಕ್ಕೆ ಸಾಧ್ಯವಾಗಿರುವುದಿಲ್ಲ.

ಇ) ಬಂದಿದೆ.

ಈ) ಹೌದು.

ಉ) ರೂ. ೨,೮೪೩–೭೨ ಲಕ್ಷಗಳ ವಿಶ್ವಬ್ಯಾಂಕ್ ಸಹಾಯದ ಯೋಜನೆಯ ಮೇರೆಗೆ ೧೯೮೪–೮೫ರಲ್ಲಿ ಲಭ್ಯವಾಗಿರುವ ಹೆಚ್ಚಿನ ಉತ್ಪಾದನಾ ಸಾಮರ್ಥ್ಯವನ್ನು ಬಳಸಿಕೊಳ್ಳುವ ಎಲ್ಲಾ ಪ್ರಯತ್ನಗಳನ್ನು ಕಂಪನಿ ಮಾಡುತ್ತಲಿದೆ.

ಊ) ೧೯೮೫–೮೬ ನೇ ಸಾಲಿನವರೆಗೆ ಕಂಪನಿಯ ಲಾಭ ನಷ್ಟ ವಿವರಗಳು ಈ ಕೆಳಕಂಡಂತಿರುತ್ತವೆ.

(ರೂ. ಲಕ್ಷಗಳಲ್ಲಿ)

ವರ್ಷಗಳು	ಲಾಭ	ನಷ್ಟ
೧೯೮೧–೮೨	೨೧.೦೫	...
೧೯೮೨–೮೩	೫೯.೫೬	...
೧೯೮೩–೮೪	೩೧.೦೩	...
೧೯೮೪–೮೫	...	೨೫೭.೩೦
೧೯೮೫–೮೬	...	೩೪೧–೯೬

(ತಾತ್ಕಾಲಿಕವಾಗಿ)

ಋ) ಸರ್ಕಾರವು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಂಡಿದೆ.

೧) ನಿಗಮವು ಉತ್ಪಾದಿಸುವ ಸರಕುಗಳ ಮಾರಾಟದ ವ್ಯವಸ್ಥೆಗೆ ಹೊಸಸ್ವರೂಪ ಕೊಡಲಾಗುತ್ತಿದೆ. ಅಲ್ಲದೆ ಇತ್ತೀಚೆಗೆ ಮಾರಾಟ ವ್ಯವಸ್ಥೆಯನ್ನು ಸೂಕ್ಷ್ಮ ರೀತಿಯಲ್ಲಿ ಸಂಘಟಿಸುವುದಕ್ಕಾಗಿ ಮಾರಾಟ ನಿರ್ದೇಶಕರ ನೇಮಕಾತಿಯನ್ನೂ ಮಾಡಲಾಗಿದೆ.

೨) ರಾಜ್ಯ ಸರ್ಕಾರವು ಚೈನಾದಿಂದ ರೇಷ್ಮೆಯ ಆಮದನ್ನು ನಿಷೇಧಿಸಲು ಅಥವಾ ಕಡಿತಗೊಳಿಸಲು ಕೇಂದ್ರ ಸರ್ಕಾರವನ್ನು ಕೇಳಿಕೊಂಡಿದೆ.

೩) ಸರ್ಕಾರವು ಬೈವೋಲ್ಟೈನ್ ರೇಷ್ಮೆ ಗೂಡುಗಳ ಬಳಕೆಗೋಸ್ಕರ ಸ್ಥಾಪಿಸಿರುವ ಯಂತ್ರೋಪಕರಣಗಳಿಗೆ ಪೂರ್ಣ ಪ್ರಮಾಣದಲ್ಲಿ ಬೈವೋಲ್ಟೈನ್ ರೇಷ್ಮೆ ಗೂಡುಗಳನ್ನು ಒದಗಿಸುವಂತೆ ರೇಷ್ಮೆ ಇಲಾಖೆಯ ನಿರ್ದೇಶಕರಿಗೆ ಆದೇಶಿಸಲಾಗಿದೆ.

ಮತ್ತು

೪) ನಿಗಮವನ್ನು ಕಾಲಕಾಲಕ್ಕೆ ಸಮೀಕ್ಷೆ ಮಾಡಿ ವರದಿಯನ್ನು ಸರ್ಕಾರಕ್ಕೆ ಕಳುಹಿಸಲು ಆದೇಶಿಸಲಾಗಿದೆ.

ಮೈಸೂರು ಮಿನರಲ್ಸ್‌ರವರ ಗ್ರಾನೈಟ್ ಕಟ್ಟಿಂಗ್, ಪಾಲಿಷಿಂಗ್ ಫ್ಯಾಕ್ಟರಿ ಬಗ್ಗೆ

೬೭. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ವಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಮಿನರಲ್ಸ್ ಲಿಮಿಟೆಡ್ ಅಧೀನದಲ್ಲಿ ಹಾಸನದಲ್ಲಿ ಸ್ಥಾಪಿಸಲಾದ ಗ್ರಾನೈಟ್ ಕಟ್ಟಿಂಗ್ ಮತ್ತು ಪಾಲಿಷಿಂಗ್ ಫ್ಯಾಕ್ಟರಿ ಯೋಜಿಸಲಾದಂತೆ ಪೂರ್ತಿ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿದೆಯೆ ?

ಆ) ಇಲ್ಲವಾದಲ್ಲಿ ಅದಕ್ಕಿರುವ ಅಡಚಣೆಗಳೇನು ?

ಇ) ಅವುಗಳ ನಿವಾರಣೆಗೆ ಯಾವ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಜೆ. ಎಸ್. ದೇಶಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು)

ಅ) ಇಲ್ಲ.

ಆ) ಜನವರಿಯಿಂದ ಏಪ್ರಿಲ್ ೧೯೮೬ರ ವರೆಗೆ ಬಳಕೆ ವಸ್ತುಗಳು ಮತ್ತು ಮುಖ್ಯವಾದ ಬಿಡಿ ಭಾಗಗಳು ಪಶ್ಚಿಮ ಜರ್ಮನಿಯಿಂದ ಮದ್ರಾಸು ಬಂದರಿಗೆ ಹಡಗಿನಲ್ಲಿ ಬರುವುದು ವಿಳಂಬವಾದುದರಿಂದಲೂ, ವಿದ್ಯುತ್ ಏರಿಳಿತದಿಂದಾಗಿ ಕಂಟ್ರೋಲ್ ಫ್ಯಾನಲ್ಲಿನ ಕೆಲವು ಭಾಗಗಳು ಸುಟ್ಟು ಹೊದ ಪರಿಣಾಮದಿಂದಲೂ ಮತ್ತು ಮೊದಲನೇ ಹಂತದಲ್ಲಿ ಈ ಆಮದು ಮಾಡಿಕೊಂಡ ಯಂತ್ರೋಪಕರಣಗಳ ಕಾರ್ಯಗತ ಮತ್ತು ಸಂರಕ್ಷಣೆ ಮಾಡುವ ಸಮಸ್ಯೆಗಳು ಉದ್ಭವಿಸಿದುದರಿಂದಲೂ ಕಾರ್ಯಸ್ಥಗಿತಗೊಂಡಿತು.

ಇ) ಸಂಸ್ಥೆಯು ಉತ್ಪಾದನಾ ಸಾಮರ್ಥ್ಯವನ್ನು ಕುಂಠಿತಗೊಳ್ಳುವ ಮುಂಜಿಯೇ ಬಿಡಿ ಭಾಗಗಳನ್ನು ಮತ್ತು ಬಳಕೆ ಸಾಮಗ್ರಿಗಳನ್ನು ಆಮದುಮಾಡಿಕೊಳ್ಳುವ ವಿಧಾನವನ್ನು ಕಂಡುಹಿಡಿಯಿತು ಸಂಸ್ಥೆಯೇ ಯಂತ್ರೋಪಕರಣಗಳಿಗೆ ಬೇಕಾಗುವ ತದ್ರೂಪವಾದ ಬಿಡಿ ಭಾಗಗಳನ್ನು ಮತ್ತು ಬಳಕೆ ವಸ್ತುಗಳನ್ನು ದೇಶೀಯವಾಗಿಯೇ ಪಡೆಯಲು ಪರಿಶೀಲಿಸುತ್ತಿದೆ. ಈಗ ಯಂತ್ರೋಪಕರಣಗಳು ನಿಯೋಜಿತ ಸಾಮರ್ಥ್ಯದಲ್ಲಿ ನಡೆಸುವಂತಾಗಲು ಸಂಸ್ಥೆಯು ವ್ಯವಸ್ಥಾನುಸಾರವಾದ ಉತ್ಪಾದನಾ ಯೋಜನೆಯನ್ನು ವ್ಯವಸ್ಥಿತಗೊಳಿಸಿದೆ. ಸಂಸ್ಥೆಯು ವಿದ್ಯುತ್ ಏರಿಳಿತವನ್ನು ಹಾಗೂ ಆದರಿಂದ ಯಂತ್ರೋಪಕರಣಗಳಿಗೆ ಆಗುವ ಹಾನಿಯನ್ನು ತಡೆಗಟ್ಟಲು ಕ್ರಮ ತೆಗೆದುಕೊಂಡಿದೆ. ವ್ಯವಸ್ಥಿತ ಆಡಳಿತ ಹಾಗೂ ಯೋಜನೆಯಿಂದ ವಾರ್ಷಿಕ ಗುರಿಯನ್ನು ಮುಟ್ಟುವ ಆಶಾಭಾವನೆಯನ್ನು ಸಂಸ್ಥೆಯು ಹೊಂದಿದೆ.

ಕರ್ನಾಟಕದ ಮಂಡಲ ಪಂಚಾಯಿತಿಯ ವ್ಯಾಪಿಯಲ್ಲಿ ಬರುವ ದಾರಿ ದೀಪಗಳ ವ್ಯವಸ್ಥೆ ಬಗ್ಗೆ

೧೧೪. ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ)— ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಷ್ಟು ಹಳ್ಳಿಗಳಿಗೆ ವಿದ್ಯುತ್ ದೀಪಗಳನ್ನು ಪೂರೈಸಲಾಗಿದೆ.